ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - 560018.

कर्नाटक-संस्कृत-विश्वविद्यालय:
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु - ५६००१८.

ಸಂಖ್ಯೆ: ಕಸಂವಿ:ಎನ್.ಎಸ್.ಎಸ್.ಸ.ಸ/01/2016-17 ದಿನಾಂಕ:26.07.2016

ದಿನಾಂಕ:22.07.2016 ರಂದು ಶುಕ್ರವಾರ ಬೆಳಿಗ್ಗೆ 11:00 ಘಂಟೆಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಮಿತಿ ಕೊಠಡಿಯಲ್ಲಿ ನಡೆದ 2016-17ನೇ ಸಾಲಿನ ಎನ್.ಎಸ್.ಎಸ್. ಸಲಹಾ ಸಮಿತಿ ಸಭೆಯಲ್ಲಿ ಚರ್ಚಿತವಾದ ವಿಷಯಗಳ ನಡಾವಳಿ ಈ ಕೆಳಕಂಡಂತಿದೆ.

**ಸಭೆಯಲ್ಲಿ ಹಾಜರಿದ್ದವರು:**

1. **ಪ್ರೊ. ಪದ್ಮಾಶೇಖರ್,**
2. **ಪ್ರೊ.ವೈ.ಎಸ್. ಸಿದ್ದೇಗೌಡ,**
3. **ವಿದ್ವಾನ್ ಪ್ರಕಾಶ್ ಆರ್. ಪಾಗೋಜಿ,**
4. **ಡಾ. ಬಿ.ವಿ ವೆಂಕಟರಮಣ,**
5. **ವಿದ್ವಾನ್ ವೆಂಕಟೇಶ ವಿ.**
6. **ವಿದ್ವಾನ್ ಎಂ ಶಿವಮೂರ್ತಿ**
7. **ಶ್ರೀ ಅರುಣ ಪೂಜಾರ್**
8. **ಎಂ.ಸಿ. ಕುಸುಮಾದೇವಿ**
9. **ಡಾ. ಸಿ. ನಂಜುಂಡಯ್ಯ,**
10. **ವಿದ್ವಾನ್ ಸಿ. ರಾಜಶೇಖರ್‌ಮೂರ್ತಿ**
11. **ವಿದ್ವಾನ್ ಸಿ. ರೇಣುಕಾರಾಧ್ಯ**
12. **ಪಿ.ಡಿ.ಗೋವಿಂದ**
13. **ಚಂದನ ಶಾಸ್ತ್ರಿ**
14. **ಡಾ.ಎಸ್. ಮಲ್ಲನಗೌಡ,**
15. **ಡಾ. ಮಾರ್ಕಂಡಪುರ ಶ್ರೀನಿವಾಸ,**
16. **ಶ್ರೀ ಶಂಕರ ಮುಗದ,**
17. **ಶ್ರೀ ಸಿ.ಟಿ. ಶಿವೇಗೌಡ**
18. **ಡಾ. ಎಂ.ಎಸ್. ಹುಲ್ಲೊಳ್ಳಿ**
19. **ಡಾ. ಸಂತೋಷ ಸು. ಹಾನಗಲ್ಲ,**

**ಗೈರು ಹಾಜರಾದವರು:**

* **ದಾಖಲಾತಿ ಪುಸ್ತಕದಲ್ಲಿ ಇದ್ದಂತೆ.**

**ಎನ್.ಎಸ್.ಎಸ್. ಸಲಹಾ ಸಮಿತಿ** ಸಭೆಯ ಅಧ್ಯಕ್ಷತೆಯನ್ನು **ಪ್ರೊ. ಪದ್ಮಾಶೇಖರ್,** ಮಾನ್ಯ ಕುಲಪತಿಗಳು ವಹಿಸಿದ್ದರು. **ಪ್ರೊ.ವೈ.ಎಸ್. ಸಿದ್ದೇಗೌಡ** ಕುಲಸಚಿವರು, **ವಿದ್ವಾನ್ ಪಿ.ಆರ್ ಪಾಗೋಜಿ,** ಹಣಕಾಸು ಅಧಿಕಾರಿಗಳು ಉಪಸ್ಥಿತರಿದ್ದರು. **ಎನ್.ಎಸ್.ಎಸ್. ಸಲಹಾ ಸಮಿತಿ ಸಭೆಯನ್ನು** ಕಾರ್ಯಕ್ರಮದ ಸಂಯೋಜನಾಧಿಕಾರಿಗಳಾದ **ಡಾ.ಸಂತೋಷ ಸು. ಹಾನಗಲ್ಲ,** ಉಪ ನಿರ್ದೇಶಕರು, ಆಗಮಿಸಿದ್ದ ಎಲ್ಲಾ ಸದಸ್ಯರನ್ನೂ, ಹಾಗೂ ಅತಿಥಿಗಳನ್ನು ಸ್ವಾಗತಿಸಿ ಅವರುಗಳ ಪರಿಚಯವನ್ನು ಎಲ್ಲರಿಗೂ ಮಾಡಿಕೊಟ್ಟರು.

**ಚರ್ಚಿತವಾದ ವಿಷಯಗಳು:**

1. **ವಿಷಯ** : 2014-15 ಹಾಗೂ 2015-16ನೇ ಸಾಲಿನಲ್ಲಿ ಬಿಡುಗಡೆಯಾದ ಹಣದಲ್ಲಿ ಖರ್ಚು ಮಾಡಿದ ಹಣದ ಬಗ್ಗೆ ಹಾಗೂ ಉಳಿಕೆ ಹಣದ ಕುರಿತು ಮತ್ತು ಲೆಕ್ಕಪರಿಶೋಧಕರಿಗೆ (C.A) ಹಣ ನೀಡುವ ಬಗ್ಗೆ.

**ಟಿಪ್ಪಣಿ** : i)ಸಲಹಾ ಸಮಿತಿಯ ಸಭೆಯಲ್ಲಿ 2014-15 ಹಾಗೂ 2015-16ನೇ ಸಾಲಿನಲ್ಲಿ ಖರ್ಚು ಮಾಡಿದ ಒಟ್ಟು ವಿವರವನ್ನು ಸಂಯೋಜಕರು ವಿವರಿಸಿದ ವಿವರ ಈ ಕೆಳಕಂಡಂತಿದೆ.

## National Service Scheme (NSS) Year 2014-15
## Receipt and Payment Account for the Year Ended 31.03.2015

| | Receiving Amount | Amount | | Expenditure Amount | Amount |
|---|---|---|---|---|---|
| TO | OPENING BALANCE | | | | |
| " | GRANT RECEIVED GENERAL | 250000/- | BY | 1.ವಿಶ್ವವಿದ್ಯಾಲಯ ಮಟ್ಟದ ಎನ್.ಎಸ್.ಎಸ್. ಬ್ಯಾಂಕ್ ಖಾತೆಯನ್ನು ತೆರೆಯಲು **1000/–** ರೂ.ಗಳು<br>2. 2014–15ನೇ ಸಾಲಿನ ಎನ್.ಎಸ್.ಎಸ್. ಘಟಕಗಳಿಗೆ ವಾರ್ಷಿಕ ಚಟುವಟಿಕೆಗಳಿಗೆ **1,36,000/–**ರೂ.ಗಳನ್ನು ನೀಡಲಾಗಿದೆ. | 137865/- |
| " | GRANT RECEIVED SPECIAL | 225000/- | " | BANK CHARGES | 100/- |
| | | | | CLOSING BALANCE IN BANK SBM - 64166964630 | 337035/- |
| | **TOTAL** | **475000/-** | | | 475000/- |

## National Service Scheme (NSS) Year 2015-16
## Receipt and Payment Account for the Year Ended 31.03.2016

| | Receiving Amount | Amount | | Expenditure Amount | Amount |
|---|---|---|---|---|---|
| TO | OPENING BALANCE IN BANK SBM – 64166964630 | 337035/- | | | |
| " | GRANT RECEIVED - GENERAL | 250000/- | BY | 1. ದಿನಾಂಕ:10.04.2015ರಿಂದ ದಿನಾಂಕ:16.04.2015ರ ವರೆಗೆ ಒಟ್ಟು 07 ದಿನಗಳ ಕಾಲ ನಡೆದ ವಿಶ್ವವಿದ್ಯಾಲಯ ಮಟ್ಟದ ವಾರ್ಷಿಕ ವಿಶೇಷ ಶಿಬಿರಕ್ಕೆ ಬಳಸಿದ ಒಟ್ಟು ಮೊತ್ತ<br>**=1,86,343/–**<br>2. ಎನ್.ಎಸ್.ಎಸ್. ಸಂಯೋಜಕರಿಗೆ ಹಾಗೂ ಸಹಾಯಕರಿಗೆ ವಾರ್ಷಿಕ ಗೌರವ ಧನ ಹಾಗೂ ದೂರವಾಣಿ ವೆಚ್ಚ = **16,800/–**<br>3. ದಿನಾಂಕ:05.06.2015 ರಂದು ನಡೆದ ವಿಶ್ವಪರಿಸರ ದಿನಾಚರಣೆ ಹಾಗೂ ಎನ್.ಎಸ್.ಎಸ್. ಅಧಿಕಾರಿಗಳು ಮತ್ತು ಪ್ರಾಚಾರ್ಯರಿಗೆ ಒಂದು ದಿನದ ಕಾರ್ಯಾಗಾರಕ್ಕೆ ಬಳಸಿದ ಮೊತ್ತ = **33,789/–**<br>4. ಎನ್.ಎಸ್.ಎಸ್. ಸಂಯೋಜಕರಿಗೆ ಎಲ್ಲಾ ಎನ್.ಎಸ್.ಎಸ್. ಘಟಕಗಳಿಗೆ ಬೇಟಿ, ಕಾರ್ಯಪರಿಶೀಲನೆಗಾಗಿ ಪ್ರಯಾಣ ಹಾಗೂ ದಿನಭತ್ಯೆಗಾಗಿ ನೀಡಿದ ಮೊತ್ತ = **10,000/–**<br>5. 2015–16ನೇ ಸಾಲಿಗೆ ಎನ್.ಎಸ್.ಎಸ್. ಘಟಕಗಳಿಗೆ ವಾರ್ಷಿಕ ಚಟುವಟಿಕೆಗಾಗಿ ನೀಡಿದ ಮೊತ್ತ = **1,52,000/–**<br>6. ದಿನಾಂಕ:07.08.2015ರಂದು ನಡೆದ ಎನ್.ಎಸ್.ಎಸ್. ಸಲಹಾ ಸಮಿತಿ ಸಭೆಗೆ ಆಗಮಿಸಿದ ಸದಸ್ಯರಿಗೆ ಪಾವತಿಸಿದ ಪ್ರಯಾಣ ಭತ್ಯೆಯ ಮೊತ್ತ = **11,888/–**<br>7. 2015–16ನೇ ಸಾಲಿಗೆ ವಿಶ್ವವಿದ್ಯಾಲಯದ ನಿಯೋಜಿತ ಸ್ಥಳವಾದ ತಿಪ್ಪಸಂದ್ರ ತಾ: ಮಾಗಡಿ, ಜಿಲ್ಲೆ: ರಾಮನಗರ ಇಲ್ಲಿ ರಾಜ್ಯ ಮಟ್ಟದ ಎನ್.ಎಸ್.ಎಸ್. ಶಿಬಿರವು ದಿನಾಂಕ: 28.12.2015 ರಿಂದ ದಿನಾಂಕ:03.01.2016ರ ವರೆಗೆ ಒಟ್ಟು 07 ದಿನಗಳ ಕಾಲ ನಡೆದ ಶಿಬಿರಕ್ಕೆ ಒಟ್ಟು ಖರ್ಚಿನ ಮೊತ್ತ **=1,92,063/–** | 602883/- |
| " | GRANT RECEOVED – SPECIAL | 225000/- | " | | |

ii) ಎನ್.ಎಸ್.ಎಸ್. ಗಾಗಿ ನೀಡಿದ ಸರ್ಕಾರದ ಹಣದಲ್ಲಿ ಎರಡು ಲಕ್ಷದ ಹದಿನಾಲ್ಕು ಸಾವಿರದ ಒಂಬೈನೂರ ಐವತ್ತೈದು (2,14,955/–)ರೂ.ಗಳು ಇನ್ನೂ ಬಳಕೆಯಾಗದೇ ಉಳಿದಿರುವ ಹಣವನ್ನು ಸಭೆಯು ಗಮನಿಸಿತು. ಕೇಂದ್ರ ಪ್ರಾಂತೀಯ ಕಛೇರಿಯ ನಿರ್ದೇಶಕರಾದ ಮಾನ್ಯ ಶ್ರೀ ಅರುಣ್ ಪೂಜಾರ್ ಅವರು ಈ ಹಣದಲ್ಲಿ ಕೆಳಕಂಡ ಕಾರ್ಯಕ್ರಮವನ್ನು ಮಾಡಬಹುದು ಎಂದು ತಿಳಿಸಿದರು.

a) ಎನ್.ಎಸ್.ಎಸ್. ಅಧಿಕಾರಿಗಳ ಒಂದು ದಿನದ ಕಾರ್ಯಗಾರವನ್ನು ಬೆಂಗಳೂರಿನ ಗಾಂಧಿಭವನದಲ್ಲಿ ನಡೆಸಲು ನಿರ್ದೇಶಿಸಿದರು. ವಿಶ್ವವಿದ್ಯಾಲಯದ ಅಡಿಯಲ್ಲಿರುವ ಎಲ್ಲಾ ಕಾಲೇಜುಗಳಲ್ಲಿ ಒಂದೊಂದು ಅಧ್ಯಾಪಕರನ್ನು ಸಭೆಗೆ ಕರೆಯಿಸಬೇಕೆಂದು ಹೇಳಿದರು. ಒಂದು ದಿನದ ಕಾರ್ಯಗಾರವನ್ನು ಬೆಂಗಳೂರಿನ ಗಾಂಧಿಭವನದಲ್ಲಿ ನಡೆಸಲು ನಿರ್ದೇಶಿಸಿದರು.

b) ವಿಶ್ವವಿದ್ಯಾಲಯದ ಮಟ್ಟದಲ್ಲಿ ಎನ್.ಎಸ್.ಎಸ್. ನಾಯಕತ್ವ ಶಿಬಿರವನ್ನು (Leadership camp) ಆಯೋಜಿಸಬೇಕೆಂದು ಅದಕ್ಕೆ ಮಾರ್ಗದರ್ಶನ ಮಾಡುತ್ತೇನೆಂದು ಹಾಗೂ ಈ ಎರಡು ಕಾರ್ಯಕ್ರಮಗಳಿಗೆ ಸಂಪೂರ್ಣ ಸಲಹೆ ಸಹಕಾರ ನೀಡಲು ಒಪ್ಪಿಕೊಂಡರು. ಈ ಶಿಬಿರವನ್ನು ವಿಶ್ವವಿದ್ಯಾಲಯದ ಅಡಿಯಲ್ಲಿ ನಡೆಯುವ **ಮೇಲುಕೋಟೆಯ ಸಂಶೋಧನಾ ಕೇಂದ್ರದ** ಆವರಣದಲ್ಲಿ ನಡೆಸಲು ಮಾನ್ಯ ಕುಲಸಚಿವರು ಸೂಚಿಸಿದರು.

iii)2014–15 ಹಾಗೂ 2015–16ನೇ ಸಾಲಿನ ಎನ್.ಎಸ್.ಎಸ್ ಗಾಗಿ ಬಿಡುಗಡೆಯಾದ ಹಣವನ್ನು ಖರ್ಚುಮಾಡಿದ ಒಟ್ಟು ಹಣದ ವಿವರವನ್ನು ಲೆಕ್ಕಪರಿಶೋಧಕರಿಂದ (Charated Accountant) ಪರಿಶೀಲಿಸಲಾಗಿದ್ದು, ಅವರಿಗೆ ಒಂದು ವರ್ಷದ ಲೆಕ್ಕಪರಿಶೀಲನೆಗೆ ಒಂದು ಸಾವಿರ ರೂ.ಗಳಂತೆ (1000) ಒಟ್ಟು 2ವರ್ಷದ ಲೆಕ್ಕ ಪರಿಶೀಲನೆಗಾಗಿ (2000/–) ಎರಡು ಸಾವಿರ ರೂ.ಗಳನ್ನು ನೀಡಲು ಶ್ರೀ ಅರುಣ ಪೂಜಾರ್ ರವರು ಸೂಚಿಸಿದರು.

**ನಿರ್ಣಯ:** ಸಭೆಯ ಸರ್ವಸದಸ್ಯರು ಚರ್ಚಿಸಿದ ಮೇಲಿನ i,ii ಮತ್ತು iii ವಿಷಯಗಳನ್ನು ಅಂಗೀಕರಿಸಿದರು.

2. **ವಿಷಯ: ಸ್ವ–ಹಣಕಾಸು ಎನ್.ಎಸ್.ಎಸ್. ಘಟಕವನ್ನು ಪ್ರಾರಂಭಿಸುವ ಬಗೆಗೆ.**

**ಟಿಪ್ಪಣಿ** : ವಿಶ್ವವಿದ್ಯಾಲಯದ ಅಡಿಯಲ್ಲಿ ನಡೆಯುವ ಎಲ್ಲ ಕಾಲೇಜಿನ ವಿದ್ಯಾರ್ಥಿಗಳಿಂದ ಪ್ರತಿ ವಿದ್ಯಾರ್ಥಿಗೆ 50 ರೂ.ಗಳಂತೆ ಹಣ ಸಂಗ್ರಹಿಸಿ ಸ್ವ– ಹಣಕಾಸು ಎನ್.ಎಸ್.ಎಸ್ ಘಟಕಗಳನ್ನು ಎಲ್ಲಾ ಕಾಲೇಜುಗಳಲ್ಲಿ ತೆರಯಲು ಚರ್ಚಿಸಲಾಯಿತು. ಅದರೆ ಮಾನ್ಯ ಕುಲಸಚಿವರು ಹಾಗೂ ಮಾನ್ಯ ಹಣಕಾಸುಅಧಿಕಾರಿಗಳು ಮೂಲತಃ ಸಂಸ್ಕೃತ ಉಚಿತ ಶಿಕ್ಷಣವಾಗಿರುವುದರಿಂದ (Free Education) ಹಣವನ್ನು ಸಂಗ್ರಹಿಸಲು ಮುಂಬರುವ ವರ್ಷದಲ್ಲಿ ಕೈಗೊಳ್ಳಲಾಗುವುದು ಎಂಬ ವಿಷಯವನ್ನು ಸಮಿತಿಗೆ ತಿಳಿಸಿದರು. ಇದಕ್ಕೆ ಎನ್.ಎಸ್.ಎಸ್. ಪ್ರಾಂತೀಯ ನಿರ್ದೇಶಕರು ಆದಷ್ಟು ಬೇಗ ಸ್ವ–ಹಣಕಾಸು ಘಟಕಗಳನ್ನು ತೆರೆಯಲು ಸೂಚಿಸಿದರು.

**ನಿರ್ಣಯ:** ಮೇಲೆ ಚರ್ಚಿಸಿದ ವಿಷಯಕ್ಕೆ ಸರ್ವಸದಸ್ಯರು ಒಪ್ಪಿಗೆ ಸೂಚಿಸಿದರು.

3. **ವಿಷಯ:– ಪ್ರಸ್ತುತ ಸಾಲಿನ 2016–17ನೇ ಸಾಲಿನಲ್ಲಿ ಎನ್.ಎಸ್.ಎಸ್. ಶಿಬಿರಗಳನ್ನು ನಡೆಸುವ ಬಗೆಗೆ.**

**ಟಿಪ್ಪಣಿ:** ಶ್ರೀ ಅರುಣ್ ಪೂಜಾರ್ ಅವರು ನಮ್ಮ ವಿಶ್ವವಿದ್ಯಾಲಯಕ್ಕೆ **ರಾಷ್ಟ್ರೀಯ ಭಾವೈಕ್ಯತ ಶಿಬಿರ**ವನ್ನು ನೀಡಲು (Nantional Integration Camp) ಒಪ್ಪಿಕೊಂಡರು. ಶಿಬಿರಕ್ಕಾಗಿ ಸ್ಥಳವನ್ನು ಹಾಗೂ ದಿನಾಂಕವನ್ನು ಎನ್.ಎಸ್.ಎಸ್. ರಾಜ್ಯ ಸಂಪರ್ಕಾಧಿಕಾರಿಗಳಿಂದ ಅಧಿಕೃತವಾಗಿ ಪತ್ರ ಬಂದ ನಂತರ ತಿರ್ಮಾನಿಸಲು ಚರ್ಚಿಸಲಾಯಿತು.

**ನಿರ್ಣಯ:** ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸರ್ವ ಸದಸ್ಯರುಗಳು ಒಮ್ಮತ ಅಭಿಪ್ರಾಯವನ್ನು ಸೂಚಿಸಿದರು.

4. **ವಿಷಯಃ ವಿಶ್ವವಿದ್ಯಾಲಯದ ಮಟ್ಟದ "ರಾಷ್ಟ್ರೀಯ ಸೇವಾ ಯೋಜನೆಯ" ಪ್ರಶಸ್ತಿಗಳನ್ನು ಎನ್.ಎಸ್.ಎಸ್. ಅಧಿಕಾರಿಗಳಿಗೆ ಹಾಗೂ ಎನ್.ಎಸ್.ಎಸ್. ಸ್ವಯಂಸೇವಕರಿಗೆ ನೀಡುವ ಬಗೆಗೆ.**

**ಟಿಪ್ಪಣಿ:** ಈಗಾಗಲೇ ಪ್ರಶಸ್ತಿಗಳಿಗೆ ಸಂಬಂಧಪಟ್ಟಂತೆ ಶ್ರೀ ಆದಿಚುಂಚನಗಿರಿ, ಸಿದ್ಧಗಂಗಾ ಮಠ ಮುಂತಾದ ಮಠಮಾನ್ಯಗಳಿಗೆ ಪ್ರಶಸ್ತಿಗಳ ಧನ ಸಹಾಯಕ್ಕಾಗಿ ಪತ್ರವನ್ನು ಬರೆಯಲಾಗಿದೆ. ಇದಕ್ಕೆ ಸಂಬಂಧ ಪಟ್ಟಂತೆ **ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದಿಂದ** ಒಂದು ಲಕ್ಷ ರೂ.ಗಳನ್ನು (1,00,000/–) ನೀಡಲು ಒಪ್ಪಿಕೊಂಡಿದ್ದಾರೆ. ಹಾಗೆಯೇ ಸಿದ್ಧಗಂಗಾ ಮಠ ಇನ್ನೂ ಉಳಿದ ಮಠಮಾನ್ಯದವರು ಸಮ್ಮತಿಸಿದ್ದು, ಹಣವನ್ನು ನೀಡಲು ಒಪ್ಪಿಕೊಂಡಿದ್ದಾರೆ. ಸಮಿತಿಯ ಸದಸ್ಯರಾದ ಡಾ. ಎಂ.ಎಸ್. ಹುಲ್ಲೋಳ್ಳಿ ಅವರು ವಿಶ್ವವಿದ್ಯಾಲಯವು ಸಹ ಹಣವನ್ನು ನೀಡಿದರೆ ಈ ಕಾರ್ಯವು ಶೀಘ್ರದಲ್ಲಿ ಕಾರ್ಯೋನ್ಮುಖವಾಗಲು ಸಹಾಯವಾಗುತ್ತದೆ ಎಂದು ಸಲಹೆ ನೀಡಿದರು. ಆದರೆ ವಿಶ್ವವಿದ್ಯಾನಿಲಯವು ಲೆಕ್ಕಪರಿಶೋಧಕರ ಆಕ್ಷೇಪಣೆ ಬರುತ್ತದೆ ಎಂದು ತಿಳಿಸಿದರು.

**ನಿರ್ಣಯ:** ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಅಧ್ಯಕ್ಷರು ಹಾಗೂ ಸದಸ್ಯರು ಹಣವನ್ನು ಕ್ರೋಡೀಕರಿಸಿ ಪ್ರಶಸ್ತಿ ನೀಡಲು ತಮ್ಮ ಸಮ್ಮತಿಯನ್ನು ಸೂಚಿಸಿದರು.

5. **ವಿಷಯಃ ಎನ್.ಎಸ್.ಎಸ್. ಮುಖಾಂತರ ಸಂಸ್ಕೃತ ಭಾಷೆಯ ಬೆಳವಣಿಗೆಯ ಬಗೆಗೆ**

**ಟಿಪ್ಪಣಿ:** ಎನ್,ಎಸ್,ಎಸ್, ಯೋಜನೆಯು ಸಾಮಾಜಿಕ ಪರಿಕಲ್ಪನೆಯ ಮೇರೆಗೆ ಸ್ಥಾಪನೆಯಾಗಿದ್ದು, ಸಂಸ್ಕೃತ ಭಾಷಾ ಬೆಳವಣಿಗೆಯನ್ನು ಎನ್.ಎಸ್.ಎಸ್. ಮುಖಾಂತರ ಕೈಗೊಳ್ಳಲು ಈಗಾಗಲೇ ಉದಾಹರಣೆಗೆ ಎನ್.ಎಸ್.ಎಸ್. ಶಿಬಿರಗಳಲ್ಲಿ ಸಂಸ್ಕೃತ ಸಂಭಾಷಣ ಶಿಬಿರ, ಸಂಸ್ಕೃತ ಪದಗಳ ಬಳಕೆ, ಎನ್.ಎಸ್.ಎಸ್. ಘಟಕಗಳಲ್ಲಿ ಸಂಸ್ಕೃತ ಅಭಿಯಾನ, ಸಂಸ್ಕೃತ ಬೀದಿ ನಾಟಕಗಳು ಮುಂತಾದವುಗಳಿಂದ ವಿಶ್ವವಿದ್ಯಾಲಯ ಕಾರ್ಯೋನ್ಮುಖವಾಗಿದೆ ಎಂದು ಸಭೆಗೆ ಸಂಯೋಜಕರು ಸೂಚಿಸಿದರು.

6. **ವಿಷಯ: ಕೇಂದ್ರ ಸರ್ಕಾರ ಹಾಗೂ ಯು.ಜಿ.ಸಿ ನಿರ್ದೇಶನದ ಪ್ರಕಾರ ಎನ್.ಎಸ್.ಎಸ್ ನ್ನು ವಿಶ್ವವಿದ್ಯಾಲಯದ ಪಠ್ಯಕ್ರಮದಲ್ಲಿ ಒಂದು ವಿಷಯವನ್ನಾಗಿ ಬೋಧಿಸುವ ಬಗೆಗೆ.**

**ಟಿಪ್ಪಣಿ :** ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ವಿಶ್ವವಿದ್ಯಾಲಯದಲ್ಲಿ ಈಗಾಗಲೇ ಎನ್.ಎಸ್.ಎಸ್. ನ್ನು ಒಂದು ವಿಷಯವನ್ನಾಗಿ ಬೋಧಿಸಲು ವಿಶ್ವವಿದ್ಯಾಲಯದ ಪ್ರಶಾಸನ ಸಮಿತಿಯಿಂದ ಒಪ್ಪಿಗೆ ಪಡೆದಿದೆ. ಮುಂಬರುವ ದಿನಮಾನಗಳಲ್ಲಿ ಇದನ್ನು ಐಚ್ಛಿಕ ವಿಷಯವನ್ನಾಗಿ ವಿದ್ಯಾರ್ಥಿಗಳಿಗೆ ತಿಳಿಸಲಾಗುವುದೆಂದು, ಆಸಕ್ತರು ಆ ವಿಷಯದಲ್ಲಿ ಅಭ್ಯಾಸ ಮಾಡುವುದಕ್ಕೆ ಸೂಚನೆ ನೀಡಲಾಗುತ್ತದೆ ಎಂದು ಅಧ್ಯಕ್ಷರು ಹಾಗೂ ಕುಲಸಚಿವರು ತಿಳಿಸಿದರು.

**ನಿರ್ಣಯ:** ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸಭೆಯ ಸರ್ವಸದಸ್ಯರು ಒಪ್ಪಿಗೆ ಸೂಚಿಸಿದರು.

7. **ವಿಷಯ: ಎನ್.ಎಸ್.ಎಸ್. ಅಧಿಕಾರಿಗಳಿಗೆ ಹಾಗೂ ಸಂಯೋಜನಾಧಿಕಾರಿಗಳಿಗೆ ವೇತನ, ದೂರವಾಣಿ, ಪ್ರಯಾಣಭತ್ಯೆ ಹಾಗೂ ಇತರೆ ಭತ್ಯೆಯನ್ನು ಪಾವತಿಸುವ ಬಗೆಗೆ**

**ಟಿಪ್ಪಣಿ:** ಸರ್ಕಾರದ ನಿರ್ದೇಶನದ ಪ್ರಕಾರ ಎನ್.ಎಸ್.ಎಸ್. ಕಾಲೇಜು ಅಧಿಕಾರಿಗಳಿಗೆ ಪ್ರತಿ ತಿಂಗಳು ನಾಲ್ಕು ನೂರು ರೂ.ಗಳು (400/–), ಎನ್.ಎಸ್.ಎಸ್. ಸಂಯೋಜಕರಿಗೆ ಪ್ರತಿ ತಿಂಗಳು ಎಂಟು ನೂರು ರೂ.ಗಳು (800/–), ಎನ್.ಎಸ್.ಎಸ್. ಕಛೇರಿ ನಿರ್ವಾಹಕರಿಗೆ ಪ್ರತಿ ತಿಂಗಳು ನಾಲ್ಕು ನೂರು ರೂ.ಗಳು (400/–), ಸಂಯೋಜಕರಿಗೆ ದೂರವಾಣಿ ವೆಚ್ಚ ವರ್ಷಕ್ಕೆ 3600/– ಹಾಗೂ ಪ್ರಯಾಣ ವೆಚ್ಚ ವರ್ಷಕ್ಕೆ 10,000/– ರೂ.ಗಳನ್ನು ನೀಡಬೇಕೆಂದು ಸಭೆಯಲ್ಲಿ ಚರ್ಚಿಸಲಾಯಿತು. ಮಾನ್ಯ ಕುಲಸಚಿವರು ಸಂಯೋಜಕರಿಗೆ ವಿಶ್ವವಿದ್ಯಾಲಯದ ಪ್ರತಿಯೊಂದು ಎನ್.ಎಸ್.ಎಸ್. ಘಟಕಗಳಿಗೆ ಭೇಟಿ ನೀಡಿ ಕಾರ್ಯವೈಖರಿಯನ್ನು ಪರಿಶೀಲಿಸಲು ಸೂಚಿಸಿದರು.

ನಿರ್ಣಯ: ಮೇಲೆ ಚರ್ಚಿಸಿದ ವಿಷಯಗಳಿಗೆ ಸರ್ವಸದಸ್ಯರು ಒಪ್ಪಿಗೆ ಸೂಚಿಸಿದರು.

**8. ವಿಷಯಃ "ದತ್ತು ಗ್ರಾಮ"ಗಳನ್ನು ತೆಗೆದುಕೊಂಡು ಕಾಲೇಜುಗಳಲ್ಲಿ ವಾರ್ಷಿಕ ವಿಶೇಷ ಶಿಬಿರವನ್ನು ನಡೆಸುವ ಬಗೆಗೆ.**

**ಟಿಪ್ಪಣಿ:** ವಿಶ್ವವಿದ್ಯಾಲಯದ ಅಡಿಯಲ್ಲಿ ಒಟ್ಟು 13 ಎನ್.ಎಸ್.ಎಸ್. ಘಟಕ ಕಾಲೇಜುಗಳನ್ನು ತೆರೆಯಲಾಗಿದ್ದು, ಪ್ರತಿಯೊಂದು ಘಟಕವು ಪ್ರತಿವರ್ಷ ಒಂದು ವಿಶೇಷ ಶಿಬಿರವನ್ನು ಹಮ್ಮಿಕೊಳ್ಳಬೇಕಾಗಿದ್ದು, ಆ ವೇಳೆಗೆ ಮೂರು ವರ್ಷಕ್ಕಾಗಿ ಒಂದು ಗ್ರಾಮವನ್ನು **"ದತ್ತು ಗ್ರಾಮ"**ವನ್ನಾಗಿ ತೆಗೆದುಕೊಳ್ಳಬೇಕಾಗುತ್ತದೆ ಎಂಬ ವಿಷಯವನ್ನು ಚರ್ಚಿಸಲಾಯಿತು.

**ನಿರ್ಣಯ:** ಇದಕ್ಕೆ ಸಂಬಂಧಪಟ್ಟಂತೆ ಪ್ರತಿ ಕಾಲೇಜಿನವರು ಒಂದು ದತ್ತು ಗ್ರಾಮವನ್ನು ತೆಗೆದುಕೊಂಡು ಶಿಬಿರವನ್ನು ಕೈಗೊಂಡು ಮಾದರಿ ಗ್ರಾಮವನ್ನಾಗಿ ಮಾಡಲು ಸ್ಥಳೀಯ ಸಂಘ ಸಂಸ್ಥೆಗಳನ್ನು ತೊಡಗಿಸಿಕೋಳ್ಳುವುದಕ್ಕೆ ನಿರ್ಣಯಿಸಿದರು.

**9. ವಿಷಯಃ ಎನ್.ಎಸ್.ಎಸ್. ಮುಖಾಂತರ "ಸ್ವಚ್ಛ ಭಾರತ ಅಭಿಯಾನ"ವನ್ನು ಹಮ್ಮಿಕೊಳ್ಳುವ ಕುರಿತು.**

**ಟಿಪ್ಪಣಿ:** ಕೇಂದ್ರ ಸರ್ಕಾರದ ನಿರ್ದೇಶನದ ಪ್ರಕಾರ ಸ್ವಚ್ಛ ಭಾರತ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದ್ದು,, ಈ ಅಭಿಯಾನವನ್ನು ಕೆಳಮಟ್ಟದಲ್ಲಿ ಕಾರ್ಯೋನ್ಮುಖವಾಗಲು ವಿಶ್ವವಿದ್ಯಾಲಯ ಎನ್.ಎಸ್.ಎಸ್ ಮುಖಾಂತರ ಅಭಿಯಾನ ಪ್ರಾರಂಭಿಸಲಾಗಿದೆ ಎಂದು ಸಂಯೋಜಕರು ತಿಳಿಸಿದರು. ಈ ವಿಷಯಕ್ಕೆ ಸಂಬಂಧಪಟ್ಟಂತೆ ಸಮಿತಿಯ ಸದಸ್ಯರಾದ ಡಾ. ಸಿ. ನಂಜುಂಡಯ್ಯ ಪ್ರಾಚಾರ್ಯರು, ಆದಿಚುಂಚನಗಿರಿ ಕ್ಷೇತ್ರ ಇವರು ಮಠಮಾನ್ಯಗಳಲ್ಲಿ ಈ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದ್ದು, ಇನ್ನೂ ಹೆಚ್ಚಾಗಿ ಕಾರ್ಯೋನ್ಮುಖವಾಗುತ್ತವೆ ಎಂದು ಸೂಚಿಸಿದರು.

**ನಿರ್ಣಯ:** ಸ್ವಚ್ಛ ಭಾರತ ಅಭಿಯಾನವನ್ನು ವಿಶ್ವವಿದ್ಯಾಲಯದ ಸಿಬ್ಬಂದಿಗಳಿಂದಲೇ ಮೊದಲು ಕಾರ್ಯೋನ್ಮುಖರಾಗಿ ಎನ್.ಎಸ್.ಎಸ್ ಘಟಕಗಳಿಗೆ ಮಾದರಿಯಾಗಲು ತಿರ್ಮಾನಿಸಲಾಯಿತು.

**ಅಧ್ಯಕ್ಷರ ಒಪ್ಪಿಗೆ ಮೇರೆಗೆ ಇನ್ನಿತರ ವಿಷಯಗಳು ಚರ್ಚೆಗೊಂಡವು.**

**ಕಾರ್ಯಕ್ರಮ ಸಂಯೋಜನಾಧಿಕಾರಿಗಳು** **ಅಧ್ಯಕ್ಷರು**